ದಿನಾಂಕ: 31.03.2016 ರಂದು ಮದ್ಯಾಹ್ನ 02.00 ಗಂಟೆಗೆ ಡಾ॥ ಕೇಶವಮೂರ್ತಿ ಆರ್. ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಟೆಂಡರ್ ಅಂಗೀಕರಿಸುವ ಸಮಿತಿ ಸಭೆಯ ನಡುವಳಿಗಳು:

ಸಭೆಯಲ್ಲಿ ಹಾಜರಿದ್ದವರು:

1) ಡಾ॥ ಕೇಶವಮೂರ್ತಿ ಆರ್. — ಅಧ್ಯಕ್ಷರು
ನಿರ್ದೇಶಕರು
ನೆ.ಯು.ಸಂ. ಬೆಂಗಳೂರು.

2) ಡಾ॥ ಉಮೇಶ ಎಲ್. — ಸದಸ್ಯರು
ವೈದ್ಯಕೀಯ ಅಧೀಕ್ಷಕರು
ನೆಫ್ರೋ-ಯುರಾಲಜಿ ಸಂಸ್ಥೆ.

3) ಶ್ರೀಮತಿ ಸುಮಿತ್ರಮ್ಮ ಎ.ಪಿ. — ಸದಸ್ಯರು
ಆಂತರಿಕ ಆರ್ಥಿಕ ಸಲಹೆಗಾರರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸಸೌಧ, ಬೆಂಗಳೂರು.

4) ಡಾ॥ ಶಿವಪ್ರಸಾದ್ ಎಸ್. ಎಂ. — ಸದಸ್ಯ ಕಾರ್ಯದರ್ಶಿಗಳು
ಸಹ ಪ್ರಾದ್ಯಾಪಕರು, ನೆಫ್ರೋಲಜಿ ವಿಭಾಗ
ಹಾಗೂ ಆಡಳಿತಾಧಿಕಾರಿಗಳು (ಪ್ರಭಾರ)
ನೆಫ್ರೋ-ಯುರಾಲಜಿ ಸಂಸ್ಥೆ.

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಸಭೆಗೆ ಆಹ್ವಾನಿಸಿ ಸಭೆಯನ್ನು ಜರುಗಿಸಲು ಕೋರಿದರು.

- ದಿನಾಂಕ: 09.03.2016ರಂದು ಪ್ರಯೋಗಶಾಲಾ ಉಪಕರಣಗಳನ್ನು ಬಾಡಿಗೆ ರೂಪದಲ್ಲಿ ಪಡೆಯುವ ಸಲುವಾಗಿ ವಿಷಯ ತಜ್ಞರು ಸಲ್ಲಿಸಿರುವ ವರದಿ ಹಾಗೂ ದಿನಾಂಕ: 23.03.2016ರಂದು ನಡೆದ ದರಸಂದಾನ ಸಮಿತಿ ಸಭೆಯಲ್ಲಿ ಸಿ.ಟಿ.ಸ್ಕ್ಯಾನ್ ಉಪಕರಣ ಖರೀದಿಸುವ ಸಲುವಾಗಿ ಟೆಂಡರ್‌ದಾರರೊಂದಿಗೆ ನಡೆಸಿದ ದರಸಂದಾನದ ವರದಿಗಳ ಪರಿಶೀಲನೆ ಹಾಗೂ ಇದರ ಬಗ್ಗೆ ತೆಗೆದುಕೊಂಡ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತದೆ.

ಸದಸ್ಯ ಕಾರ್ಯದರ್ಶಿಗಳು ಸದರಿ ವರಧಿಗಳನ್ನು ಸಭೆಯಲ್ಲಿ ಮಂಡಿಸಿದರು.

- **ದಿನಾಂಕ: 09.03.2016ರಂದು ಪ್ರಯೋಗಶಾಲಾ ಉಪಕರಣಗಳನ್ನು ಬಾಡಿಗೆ ರೂಪದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ಸ್ವೀಕೃತಿಯಾಗಿರುವ ಟೆಂಡರ್‌ದಾರರ ದರಕಾಸ್ತು ದಾಖಲೆಯ ಬಗ್ಗೆ ವಿಷಯ ತಜ್ಞರು ಸಲ್ಲಿಸಿರುವ ವರದಿ ಕುರಿತು ಚರ್ಚೆ.**

ಸಮಿತಿಯು ಮೇಲ್ಕಂಡ ವರದಿಯನ್ನು ಪರಿಶೀಲಿಸಿತು. ವರದಿಯಲ್ಲಿ ಮೆ॥ ಇಂಪ್ಯಾಕ್ಟ್ ಲ್ಯಾಬೊರೇಟರೀಸ್ ಸಂಸ್ಥೆಯವರು ದರಗಳನ್ನು ಟೆಂಡರ್ ದಾಖಲೆ ಪ್ರಕಾರ ನಮೂದಿಸಿರುವುದಿಲ್ಲ ಎಂದು ಹಾಗೂ ಈ ದರಗಳು ಸಹ ಅಧಿಕ ಎಂದು ನಮೂದಿಸಿರುವುದನ್ನು ಗಮನಿಸಲಾಯಿತು.

ಟೆಂಡರ್ ದಾಖಲೆ ಪ್ರಕಾರ ಟೆಂಡರ್‌ದಾರರು ರೀಏಜೆಂಟ್ಸ್ ಹಾಗೂ ಕ್ಯಾಲಿಬ್ರೇಷನ್ ದರಗಳನ್ನು ಸೇರಿಸಿ ಪ್ರತಿ ಟೆಸ್ಟ್‌ಗೆ ತಗಲುವ ಮೊತ್ತವನ್ನು ನಮೂದಿಸಬೇಕು ಎಂದು ತಿಳಿಸಲಾಗಿದೆ. ಆದರೆ ಸದರಿ ಸಂಸ್ಥೆಯವರು ಪ್ರತಿ ಟೆಸ್ಟ್‌ಗೆ ನಮೂದಿಸಿರುವ ದರಗಳಲ್ಲಿ ರೀಏಜೆಂಟ್ಸ್ ಹಾಗೂ ಕ್ಯಾಲಿಬ್ರೇಷನ್ ದರಗಳನ್ನು ಸೇರಿಸಿರುವುದಿಲ್ಲ. ಆದುದರಿಂದ, ಸಮಿತಿಯು ಈ ಬಗ್ಗೆ ಚರ್ಚಿಸಿ ಟೆಂಡರ್‌ದಾರರು ಟೆಂಡರ್ ದಾಖಲೆ ಪ್ರಕಾರ ದರಗಳನ್ನು ನಮೂದಿಸದೆ ಇರುವುದರಿಂದ ಇವರ ದರಕಾಸ್ತನ್ನು ಆರ್ಥಿಕವಾಗಿ ಪ್ರತಿಕ್ರಿಯಾಶೀಲವಲ್ಲದ (Financially Non-Responsive) ಎಂದು ತೀರ್ಮಾನಿಸಿತು.

ದಿನಾಂಕ:01.03.2016ರಂದು ಜರುಗಿದ ಟೆಂಡರ್ ಅಂಗೀಕರಿಸುವ ಸಭೆಯ ನಡವಳಿ ಪ್ರಕಾರ ಮೆ॥ ರಾಘವ ಬಯೋಮೆಡಿಕಲ್ಸ್ ಸಂಸ್ಥೆಯವರ ಟೆಂಡರನ್ನು Financially Non-Responsive ಎಂದು ಈಗಾಗಲೆ ತೀರ್ಮಾನಿಸಿರುವುದನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು.

ಪ್ರಯೋಗಶಾಲಾ ಉಪಕರಣಗಳನ್ನು ಬಾಡಿಗೆ ರೂಪದಲ್ಲಿ ಪಡೆಯುವ ಸಲುವಾಗಿ ಸ್ವೀಕೃತಿಯಾಗಿದ್ದ ಎರಡೂ ಟೆಂಡರ್‌ಗಳು ಸಹ ತಾಂತ್ರಿಕ ದೋಷಗಳಿಂದ ತಿರಸ್ಕೃತಗೊಂಡಿರುವುದರಿಂದ ಸದರಿ ಉಪಕರಣಗಳಿಗೆ ಮರು ಟೆಂಡರ್ ಆಹ್ವಾನಿಸಲು ಸಮಿತಿಯು ತೀರ್ಮಾನಿಸಿತು.

- **ದಿನಾಂಕ: 23.03.2016ರಂದು ನಡೆದ ಸಿ.ಟಿ.ಸ್ಕ್ಯಾನ್ ಉಪಕರಣ ಖರೀದಿಸಲು ನಡೆಸಿದ ದರಸಂಧಾನ ಸಮಿತಿ ಸಭೆಯ ವರದಿಯನ್ನು ಕುರಿತು:**

ದರಸಂಧಾನ ಸಮಿತಿಯು ಸಲ್ಲಿಸಿರುವ ವರದಿಯನ್ನು ಹಾಗೂ ಟೆಂಡರ್‌ದಾರರ ಒಪ್ಪಿಗೆ ಪತ್ರವನ್ನು ಸಮಿತಿಯು ಪರಿಶೀಲಿಸಿತು. ಕಸ್ಟಮ್ಸ್ ತೆರಿಗೆಯು 7.5% ಹೆಚ್ಚಳವಾಗಿದ್ದು ವ್ಯತ್ಯಾಸದ ಮೊತ್ತವನ್ನು ನಮ್ಮ ಸಂಸ್ಥೆಯು ಭರಿಸಬೇಕಾಗಿರುತ್ತದೆ ಎಂಬುದನ್ನು ಗಮನಿಸಲಾಯಿತು. ಟೆಂಡರ್‌ದಾರರಾದ ಮೆ॥ ಫೋರೆಸ್ಸ್ ಹೆಲ್ತ್‌ಕೇರ್ LLP ಸಂಸ್ಥೆಯ ಪ್ರತಿನಿಧಿಯೊಂದಿಗೆ ದರಸಂದಾನ ನಡೆಸಿ ಅವರು ನೀಡಿದ ರಿಯಾಯಿತಿ

ದರಗಳು, ಕಸ್ಟಮ್ಸ್ ತೆರಿಗೆಯ ಹೆಚ್ಚುವರಿ ಮೊತ್ತ ಹಾಗೂ Turn Key worksಗಳನ್ನೊಳಗೊಂಡಂತೆ ಸಿ.ಟಿ.ಸ್ಕ್ಯಾನ್ ಉಪಕರಣ ಸರಬರಾಜು ಮಾಡಲು ವರದಿಯಲ್ಲಿ ನಮೂದಿಸಿರುವ ಒಟ್ಟು ಮೊತ್ತವು ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಮೂಲ ಉಪಕರಣದ ಮೊತ್ತ | ರೂ. 1,73,45,971.00 |
| ಕಸ್ಟಮ್ಸ್ ಡ್ಯೂಟಿ ಅಧಿಕ 7.5% | ರೂ. 13,00,947.00 |
| ಮೊತ್ತ | ರೂ. 1,86,46,918.00 |
| ರಿಯಾಯಿತಿ ಮೊತ್ತ | ರೂ. - 10,00,000.00 |
| ಮೊತ್ತ | ರೂ. 1,76,46,918.00 |
| ಮಾರಾಟ ತೆರಿಗೆ @ 5.5% | ರೂ. 9,70,580.49 |
| ಮೊತ್ತ | ರೂ. 1,86,17,498.49 |
| Turn Key works | ರೂ. 27,00,000.00 |
| **ಒಟ್ಟು ಮೊತ್ತ** | **ರೂ. 2,13,17,498.49** |

ಟೆಂಡರ್‌ದಾರರು ರಾಜ್ಯದಲ್ಲಿ ಇತರೆ ಸಂಸ್ಥೆಗಳಿಗೆ ಇದೆ ಉಪಕರಣವನ್ನು ಸರಬರಾಜು ಮಾಡಿರುವ ಬಗ್ಗೆ ಸಲ್ಲಿಸಿರುವ ಸರಬರಾಜು ಆದೇಶಗಳನ್ನು ಪರಿಶೀಲಿಸಿತು. ಅವುಗಳ ಪ್ರಕಾರ ನಮ್ಮ ಸಂಸ್ಥೆಗೆ ನಮೂದಿಸಿರುವ ದರಗಳು ಬೇರೆ ಸಂಸ್ಥೆಗೆ ನಮೂದಿಸಿರುವ ದರಗಳಿಗಿಂತ ಕಡಿಮೆ ಇರುವುದನ್ನು ಗಮನಿಸಿತು.

ಸಿ.ಟಿ.ಸ್ಕ್ಯಾನ್ ಖರೀದಿಸಲು ಆರ್ಥಿಕ ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದಿರುವ ಮೊತ್ತವು ರೂ. 1.25 ಲಕ್ಷ ಆಗಿರುತ್ತದೆ. ಟೆಂಡರ್‌ದಾರರು ಸದರಿ ಉಪಕರಣವನ್ನು Turn Key works ಒಳಗೊಂಡಂತೆ ಸರಬರಾಜು ಮಾಡಲು ರೂ. 2,13,17,498.49 (ರಿಯಾಯಿತಿ ನಂತರ) ನಮೂದಿಸಿರುತ್ತಾರೆ. ಮಂಜೂರಾಗಿರುವ ಮೊತ್ತಕ್ಕಿಂತ ಟೆಂಡರ್‌ದಾರರು ನಮೂದಿಸಿರುವ ಮೊತ್ತವು ಅದಿಕವಾಗಿದ್ದು ವ್ಯತ್ಯಾಸದ ಮೊತ್ತ ರೂ. 88,18,498.49 ಇರುವುದನ್ನು ಸಮಿತಿಯು ಗಮನಿಸಿತು.

ಮೇಲ್ಕಂಡ ಅಂಶಗಳ ಬಗ್ಗೆ ಚರ್ಚಿಸಿ ಕೆ.ಟಿ.ಪಿ.ಪಿ. ನಿಯಮಾನುಸಾರ ಒಂದು ಟೆಂಡರ್ ಮಾತ್ರ ಸ್ವೀಕೃತಿಯಾಗಿರುವ ಸಂದರ್ಭದಲ್ಲಿ ಉಪಕರಣವು ಅವಶ್ಯಕವಾಗಿ ಬೇಕಾಗಿದ್ದಲ್ಲಿ ಟೆಂಡರ್‌ದಾರರು ನಮೂದಿಸಿರುವ ದರಗಳು ಮಾರುಕಟ್ಟೆ ದರಕ್ಕೆ ಹೋಲಿಕೆಯಾದಲ್ಲಿ ಅದನ್ನು ಮನವರಿಕೆ ಮಾಡಿಕೊಂಡು

ಖರೀದಿಸಲು ಅವಕಾಶವಿರುವುದರಿಂದ ಸಿ.ಟಿ.ಸ್ಕ್ಯಾನ್ ಉಪಕರಣಕ್ಕೆ ನಮೂದಿಸಿರುವ ದರಗಳು ಇತರೆ ಸಂಸ್ಥೆಗಳಿಗೆ ನಮೂದಿಸಿರುವ ದರಗಳಿಗಿಂತ ಕಡಿಮೆ ಇರುವುದರಿಂದ ಹಾಗೂ ಟೆಂಡರ್‌ದಾರರು ನಮೂದಿಸಿರುವ ದರವು ಸಮಂಜಸವಾಗಿದೆ ಎಂದು ಪ್ರಾಧ್ಯಾಪಕರು, ವಿಭಾಗದ ಮುಖ್ಯಸ್ಥರು ರೇಡಿಯಾಲಜಿ ವಿಭಾಗ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಇವರು ದರಸಂದಾನ ಸಮಿತಿ ಸಭೆಯಲ್ಲಿ ತಿಳಿಸಿರುವುದರಿಂದ ಮೆ॥ ಫೋರೆಸ್ಸ್ ಹೆಲ್ತ್‌ಕೇರ್ LLP ಇವರು ಮೂಲ ಉಪಕರಣಕ್ಕೆ ನೀಡಿರುವ ರಿಯಾಯಿತಿಯನ್ನು ಒಪ್ಪಿಕೊಂಡು Turn Key works ಒಳಗೊಂಡಂತೆ ಸಿ.ಟಿ.ಸ್ಕ್ಯಾನ್ ಉಪಕರಣ ಸರಬರಾಜು ಮಾಡಲು ಟೆಂಡರ್‌ದಾರರು ನಮೂದಿಸಿರುವ ಒಟ್ಟು ಮೊತ್ತ ರೂ. 2,13,17,498.49 (ರಿಯಾಯಿತಿ ನಂತರ)ಗಳನ್ನು ಸಮಿತಿಯು ಅಂಗೀಕರಿಸಿತು.

ಸಿ.ಟಿ.ಸ್ಕ್ಯಾನ್ ಉಪಕರಣಕ್ಕೆ ಮಂಜೂರಾಗಿರುವ ಮೊತ್ತಕ್ಕಿಂತ ಟೆಂಡರ್‌ದಾರರು ನಮೂದಿಸಿರುವ ಮೊತ್ತವು ರೂ. 88,18,498.49 ಅಧಿಕವಾಗಿರುವುದರಿಂದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ಇವರ ಆಡಳಿತಾತ್ಮಕ ಅನುಮೋದನೆ ಪಡೆದು ನಂತರ ಮುಂದಿನ ಕ್ರಮ ತೆಗೆದುಕೊಳ್ಳಲು ಸಮಿತಿಯು ತೀರ್ಮಾನಿಸಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಅಧ್ಯಕ್ಷರು,
ಟೆಂಡರ್ ಆಹ್ವಾನ ಸಮಿತಿ ಹಾಗೂ
ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ
ಬೆಂಗಳೂರು.